

ಉಮ್‌ಗೋಟ್ ದಾರಿ ಗೌಹಾತಿ ಮತ್ತು ಶಿಲಾಂಗ್‌ಗೆ ನೇರವಾಗಿ ವಿಮಾನ–ರೈಲು ಸಂಪರ್ಕವಿದೆ. ಶಿಲ್ಲಾಂಗ್‌ನ ಬಾರಾ ಬಝಾರ್‌ನಿಂದ ದಾವ್‌ಕಿಗೆ ತಲುಪಲು ಪ್ರತಿ ದಿನ ಬೆಳಗ್ಗೆ ಬಸ್ ಲಭ್ಯವಿದೆ. ಆದರೆ, ಟ್ಯಾಕ್ಸಿ ಬುಕ್ ಮಾಡಿಕೊಂಡು ಹೋಗುವುದೇ ಉತ್ತಮ. ಏಕೆಂದರೆ, ಮಾರ್ಗ ಮಧ್ಯೆ ಎಲ್ಲಿ ಬೇಕಾದರೂ ನಿಲ್ಲಿಸಿ, ಹತ್ತಿರದಿಂದ ಪ್ರಕೃತಿ ಸಿರಿಯನ್ನು ಸವಿಯಲು ಸಾಧ್ಯವಾಗುತ್ತದೆ.

ಉಮ್ ಗೋಟ್ ತಟದಲ್ಲಿ ಲೇಖಕಿ





ಎದುರಿನ ವಾಹನಗಳಾಗಲೀ, ಮುಂದಿರುವ ರಸ್ತೆಯ ತಿರುವುಗಳಾಗಲೀ ಕಣ್ಣಿಗೆ ಕಾಣಿಸವು. ಹೀಗಾಗಿಯೇ ಈ ರಸ್ತೆಯಲ್ಲಿ ಸಾಗುವ ಎಲ್ಲಾ ವಾಹನಗಳು ಹಗಲಿನಲ್ಲೂ ಹೆಡ್‌ಲೈಟ್ ಉರಿಸುತ್ತಲೇ ತಮ್ಮ ಬರುವಿಕೆಯನ್ನು ಸೂಚಿಸುತ್ತಾ ಸಾಗುತ್ತವೆ. ಪ್ರಕೃತಿ ಸೌಂದರ್ಯದಲ್ಲಿ ತನ್ಮಯರಾಗಿ ರಸ್ತೆಯಲ್ಲಿದ್ದೇವೆ ಎಂಬುದನ್ನೂ ಮರೆತಿದ್ದ ನಮಗೆ ವಾಹನಗಳ ಬಗ್ಗೆ ಎಚ್ಚರವಾಗಿರುವಂತೆ ಚಾಲಕ ಎಚ್ಚರಿಕೆ ನೀಡಿದ್ದು ಸಮಯೋಚಿತವಾಗಿತ್ತು.

ನಾವು ದಾವ್‌ಕಿ ತಲುಪುವ ವೇಳೆಗೆ ಮಧ್ಯಾಹ್ನ 2 ಗಂಟೆ. ಹತ್ತಿರದಲ್ಲೇ ಇದ್ದ ಢಾಬಾದಲ್ಲಿ ಸರಳ ಆದರೆ ಸವಿಯಾದ ಊಟ ನಮಗಾಗಿ ಕಾಯುತ್ತಿತ್ತು. ದಾವ್‌ಕಿಯ ರಸ್ತೆಯ ದುಸ್ಥಿತಿಯನ್ನು ನೋಡಿ ನಾವೆಲ್ಲರೂ ಚಕಿತಗೊಂಡಿದ್ದೆವು. ಇದು ಇಲ್ಲಿ ನಡೆಯುತ್ತಿರುವ ಸುಣ್ಣದ ಕಲ್ಲು ಮತ್ತು ಕಲ್ಲಿದ್ದಲು ಗಣಿಗಾರಿಕೆಯ ಬಳುವಳಿ. ಭಾರೀ ವಾಹನಗಳ ಅತಿಯಾದ ಓಡಾಟವೇ ರಸ್ತೆಯ ಈ ದುಸ್ಥಿತಿಗೆ ಕಾರಣ ಎಂದು ನಂತರ ತಿಳಿಯಿತು! ಭಾರತ ಮತ್ತು ಬಾಂಗ್ಲಾದೇಶದ ನಡುವೆ ಪ್ರಮುಖ ವಾಣಿಜ್ಯ ಮಾರ್ಗ ದಾವ್‌ಕಿ. ನಿತ್ಯ ನೂರಾರು ಟ್ರಕ್‌ಗಳು ಈ ಮಾರ್ಗದಲ್ಲಿ ಹಾದುಹೋಗುತ್ತವೆ.

ಭಾರತ–ಬಾಂಗ್ಲಾದೇಶ ಗಡಿಯ ಜೈನ್‌ತಿಯಾ ಹಿಲ್ಸ್ ಜಿಲ್ಲೆಯ ಚಿಕ್ಕ ಆದರೆ ಅತಿ ಚಟುವಟಿಕೆಯ ಪಟ್ಟಣ ದಾವ್‌ಕಿಯ ಮೂಲಕ ಉಮ್‌ಗೋಟ್ ಹಾದುಹೋಗುತ್ತದೆ. ನದಿಯ ಪಾರದರ್ಶಕತೆ ಅದನ್ನೊಂದು ದಂತಕಥೆಯನ್ನಾಗಿಸಿದೆ. ನಮ್ಮ ಅದೃಷ್ಟಕ್ಕೆ ನಾವು ಹೋದಾಗ ದಾವ್‌ಕಿಯಲ್ಲಿ ಮಳೆ ಇರಲಿಲ್ಲ. ವಾತಾವರಣ ತಿಳಿಯಾಗಿತ್ತು, ಸೂರ್ಯನ ಬೆಳಕು ಸಾಕಷ್ಟಿತ್ತು.

ಮಳೆಗಾಲದಲ್ಲಿ ದಾವ್‌ಕಿ ಭೇಟಿ ಸೂಕ್ತವಲ್ಲ. ಏಕೆಂದರೆ, ಆ ಸಂದರ್ಭದಲ್ಲಿ ಮಳೆ ನೀರಿನ ಬೆರಕೆಯಿಂದಾಗಿ ನದಿಯ ನೀರು ಪಾರದರ್ಶಕತೆ ಕಳೆದುಕೊಂಡಿರುತ್ತದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ದಾವ್‌ಕಿ ಭೇಟಿಗೆ ಹೇಳಿ ಮಾಡಿಸಿದ ಸಮಯ. ಆದರೆ ಆಗಲೂ ನೀವು ಭೇಟಿ ನೀಡಿದ ದಿನದಂದು ಮಂಜು ಮುಸುಕಿದ ವಾತಾವರಣವಿದ್ದರೆ, ಅದೃಷ್ಟ ಕೈಕೊಟ್ಟಂತೆಯೇ; ನೀವು ಉಮ್‌ಗೋಟ್ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗುವುದಿಲ್ಲ.

## ಸ್ವಪ್ನಸದೃಶ ನದಿವಿಹಾರ

ಸ್ಫಟಿಕ ಶುಭ್ರವಾದ, ಗಾಜಿನ ಪರದೆಯಂತೆ ಕಾಣುವ ಪಾರದರ್ಶಕ ನೀರಿನ ಮೇಲೆ ದೋಣಿಯಲ್ಲಿ ಸಾಗುವುದು ಅನನ್ಯ ಅನುಭವ. ನಮ್ಮದು ಹುಟ್ಟುದೋಣಿ. ಆ ನಿಶ್ಶಬ್ದ ಮತ್ತು ನಿಷ್ಕಲ್ಮಷ ವಾತಾವರಣದಲ್ಲಿ ಹುಟ್ಟಿನ ಲಯಬದ್ಧ ಸದ್ದನ್ನು ಬಿಟ್ಟರೆ ಬೇರೆಲ್ಲವೂ ಆ ನಿಸರ್ಗ ಸಿರಿಯನ್ನು ಆಸ್ವಾದಿಸುತ್ತಾ ಧ್ಯಾನ ಮಗ್ನವಾಗಿದ್ದಂತೆ ಕಾಣುತ್ತಿದ್ದವು. ದೋಣಿಯಲ್ಲಿ ಸಾಗುತ್ತಾ ನದಿಯ ತಳವನ್ನು ನೋಡಿದರೆ, ಅದು ನದಿಯ ಮೇಲ್ಮೈ ಜೊತೆ ಬೆರೆತುಹೋದಂತೆ ಭಾಸವಾಗುತ್ತಿತ್ತು. ದೋಣಿಯು ನೀರಿನ ಸ್ಫಟಿಕ ಶುಭ್ರತೆಯನ್ನು ಎತ್ತಿತೋರುತ್ತಿತ್ತು. ನದಿಯ ನೀರು ಎಷ್ಟು ಪಾರದರ್ಶಕವಾಗಿರುತ್ತದೆಯೆಂದರೆ, ನದಿಯ ತಳದಲ್ಲಿ ದೋಣಿಯ ನೆರಳಿನ ಬಿಂಬವನ್ನು ಕೂಡ ಕಾಣಬಹುದು. ದೋಣಿಯು ಅಕ್ಷರಶಃ ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಗುತ್ತದೆ. ಅದೊಂದು ವರ್ಣನಾತೀತ ಅನುಭವ. ನೀರಿನೊಳಗೆ ಬಣ್ಣ ಬಣ್ಣದ ಮೀನುಗಳ ಚೆಲ್ಲಾಟವನ್ನು ನಾವು ಹೊರಗಿನಿಂದಲೇ ಕಾಣಬಹುದು. ಸುತ್ತಲಿನ ಗಿರಿ ಕಂದರಗಳು ನಮ್ಮನ್ನು ಸಮ್ಮೋಹನಗೊಳಿಸುತ್ತದೆ.

ಉಮ್‌ಗೋಟ್ ನದಿಯು ರಿವರ್ ಅಥವಾ ಜೈನ್‌ತಿಯಾ ಹಿಲ್ಸ್ ಹಾಗೂ ಖಾಶಿ ಹಿಲ್ಸ್‌ನ ಹಿಮಖೈರಿಮ್ ನಡುವೆ ನೈಸರ್ಗಿಕ ಗಡಿಯನ್ನು ನಿರ್ಮಿಸಿವೆ. ಇವೆರಡರ ನಡುವೆ ನದಿಗೆ ಅಡ್ಡಲಾಗಿ ತೂಗು ಸೇತುವೆಯನ್ನು ನಿರ್ಮಿಸಲಾಗಿದೆ. ಬಾಂಗ್ಲಾ ದೇಶಕ್ಕೆ ಇದುವೇ ಪ್ರವೇಶ ದ್ವಾರ. ಎಲ್ಲ ವ್ಯಾಪಾರ–ವ್ಯವಹಾರಗಳು ನಡೆಯುವುದು ಇದರ ಮೂಲಕವೇ. 1932ರಲ್ಲಿ ಬ್ರಿಟಿಷರು ನಿರ್ಮಿಸಿದ ಈ ಸೇತುವೆಯ ಮೇಲೆ ನಿಂತು, ಹಸಿರು ಬೆಟ್ಟಗಳ ನಡುವೆ ಹಾದುಹೋಗುವ ಪಚ್ಚೆವರ್ಣದ ನದಿಯನ್ನು ಹಾಗೂ ಅದರಲ್ಲಿ ತೇಲುತ್ತಿರುವ ನೂರಾರು ದೋಣಿಗಳನ್ನು ನೋಡುವುದು ಕಣ್ಣಿಗೆ ಹಬ್ಬ. ದಾವ್‌ಕಿಯಿಂದ ನಾವು ಹೊರಟ ನಂತರವೂ ಈ ದೃಶ್ಯವು ಕಣ್ಣಿಗೆ ಕಟ್ಟಿದಂತೆ ನಮ್ಮನ್ನು ಕಾಡುತ್ತದೆ. ■